11035750

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2021ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳನ್ನು ಘೋಷಿಸುವ ಬಗ್ಗೆ.

ಓದಲಾಗಿದೆ:1. ಸರ್ಕಾರದ ಆದೇಶ ಸಂ: ಕಸಿಐ-ಪಿಐಎಫ್/42/2023, ದಿ:30/01/2024.

2. ಸರ್ಕಾರದ ತಿದ್ದುಪಡಿ/ಸೇರ್ಪಡೆ ಆದೇಶ ಸಂ: ಕಸಿಐ-ಪಿಐಎಫ್/42/2023, ದಿ:19/03/2025 ಮತ್ತು 09/05/2025.

3. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಏಕಕಡತದ ಟಿಪ್ಪಣಿ ಸಂ:ವಾಸಾಸಂಇ/ಚಚಿಶಾ/ಪ್ರಶಸ್ತಿ/2025-26/5769 ದಿ:28/08/2025.

-@@@-

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸರ್ಕಾರದ ಆದೇಶ ಮತ್ತು ತಿದ್ದುಪಡಿ/ಸೇರ್ಪಡೆ ಆದೇಶಗಳಲ್ಲಿ ಶ್ರೀ ಸದಾಶಿವ ಶೆಣೈ, ಹಿರಿಯ ಪತ್ರಕರ್ತರು ಇವರ ಅಧ್ಯಕ್ಷತೆಯಲ್ಲಿ 2021ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳಿಗಾಗಿ ಚಲನಚಿತ್ರಗಳನ್ನು ಆಯ್ಕೆ ಮಾಡಲು ಆಯ್ಕೆ ಸಲಹಾ ಸಮಿತಿಯನ್ನು ರಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ 2021ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಾಗಿ ಒಟ್ಟು 58 ಚಲನಚಿತ್ರಗಳ ನಿರ್ಮಾಪಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದು, ರಾಜ್ಯ ಚಲನಚಿತ್ರ ಪ್ರಶಸ್ತಿಗಾಗಿ ಸ್ಪರ್ಧೆಯಲ್ಲಿದ್ದ ಪ್ರತಿಯೊಂದು ಚಲನಚಿತ್ರವನ್ನು ಆಯ್ಕೆ ಸಮಿತಿಯು ವೀಕ್ಷಿಸುವಾಗ ಕೇಂದ್ರ ಚಲನಚಿತ್ರ ಪ್ರಮಾಣಪತ್ರ ಮಂಡಳಿ (ಸಿಬಿಎಫ್‌ಸಿ) ನೀಡುವ ಪ್ರಮಾಣ ಪತ್ರಗಳನ್ನು ಆರಂಭದಲ್ಲಿಯೇ ಪರಿಶೀಲಿಸಿ, ಸಮಿತಿಯು ಒಮ್ಮತದಿಂದ ಕನ್ನಡ ಭಾಷೆಯ 1) ಫಿಸಿಕ್ಸ್ ಟೀಚರ್ 2) ಪುಟ್ಟನ ಸ್ವರ್ಗ ಮತ್ತು 3) ಸಾವಿತ್ರಿ ಚಲನಚಿತ್ರಗಳು 2021ರಲ್ಲಿ ಸೆನ್ಸಾರ್ ಆಗಿ 2022ರಲ್ಲಿ ಮರು ಸೆನ್ಸಾರ್ (ರೀ-ಸೆನ್ಸಾರ್) ಆಗಿರುವ ಹಿನ್ನೆಲೆಯಲ್ಲಿ ಮತ್ತು 4) ಡಿಯರ್ ವಿಕ್ರಮ್ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದ ಚಲನಚಿತ್ರವು ಅದೇ ಹೆಸರಿನಲ್ಲಿ ಬಿಡುಗಡೆಯಾಗಿದ್ದರೂ, ಸದರಿ ಚಲನಚಿತ್ರದ ಹೆಸರಿನಲ್ಲಿ ಸೆನ್ಸಾರ್ ಪ್ರಮಾಣ ಪತ್ರ ಇಲ್ಲದಿದ್ದರಿಂದ ಹಾಗೂ 90 ನಿಮಿಷಗಳ ಅವಧಿಗಿಂತ ಕಡಿಮೆ ಇದ್ದ ಕಾರಣ 5) ಏಕಚಕ್ರ ಚಲನಚಿತ್ರಗಳನ್ನು ತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಸಮಿತಿಯು ವೀಕ್ಷಿಸಿರುವುದಿಲ್ಲ.

ಈ ಐದು ಚಲನಚಿತ್ರಗಳನ್ನು ಹೊರತು ಪಡಿಸಿ, ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿಯು 53 ಚಲನಚಿತ್ರಗಳನ್ನು ವೀಕ್ಷಿಸಿ 2021ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಾಗಿ ಬಹುಮತದಿಂದ ಆಯ್ಕೆ ಮಾಡಿ ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿ, ಸರ್ಕಾರದ ಆದೇಶವನ್ನು

2.....

Scanned with OKEN Scanner

ಹೊರಡಿಸುವಂತೆ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕೆಸಿಐ-ಪಿಐಎಫ್/ 47/2025, ಬೆಂಗಳೂರು, ದಿನಾಂಕ:29/09/2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದಿಂದ ನೇಮಿಸಲಾಗಿದ್ದ 2021ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿಯ ವರದಿಯನ್ನು ಅಂಗೀಕರಿಸಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನಂತೆ 2021ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳನ್ನು ಘೋಷಿಸಲು ಸರ್ಕಾರವು ಹರ್ಷಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

M. Jacintha 29/9/2025
(ಎಂ.ಜೆಸಿಂತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ವಾರ್ತಾ ಶಾಖೆ) 29/09/25

ಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಬೆಂಗಳೂರು.
2. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
4. ಪ್ರಶಸ್ತಿ ವಿಜೇತರಿಗೆ (ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆರವರ ಮುಖಾಂತರ)
5. ಸರ್ಕಾರದ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ (5&7), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

3......

Scanned with OKEN Scanner

ಸರ್ಕಾರಿ ಆದೇಶ ಸಂಖ್ಯೆ:ಕೆಸಿಐ-ಪಿಐಎಫ್/ 47/2025, ಬೆಂಗಳೂರು,ದಿನಾಂಕ:29/09/2025.

## ಅನುಬಂಧ

### 2021ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳ ವಿವರ

| ಕ್ರ.ಸಂ | ಪ್ರಶಸ್ತಿಗಳ ವಿವರ | ಪ್ರಶಸ್ತಿ ವಿಜೇತರು | ಪ್ರಶಸ್ತಿ ಮೊತ್ತದ ವಿವರ |
|---|---|---|---|
| 1) | **ಮೊದಲನೆ ಅತ್ಯುತ್ತಮ ಚಿತ್ರ : ದೊಡ್ಡಹಟ್ಟಿ ಬೋರೇಗೌಡ** | | |
| | ಎ) ನಿರ್ಮಾಪಕ (ಶ್ರೀ ಕೆ.ಸಿ.ಎನ್. ಗೌಡ ಪ್ರಶಸ್ತಿ) | ಮೆ: ರಾಜರಾಜೇಶ್ವರಿ ಕಂಬೈನ್ಸ್ ಶ್ರೀ ಲೋಕೇಶ ಕೆ.ಎಂ | ಒಂದು ಲಕ್ಷ ರೂ.ಗಳ ನಗದು ಹಾಗೂ 50 ಗ್ರಾಂ ಚಿನ್ನದ ಪದಕ |
| | ಬಿ) ನಿರ್ದೇಶಕ (ಹೆಚ್.ಎಲ್.ಎನ್. ಸಿಂಹ ಪ್ರಶಸ್ತಿ) | ಶ್ರೀ ರಘು ಕೆ. ಎಂ | ಒಂದು ಲಕ್ಷ ರೂ.ಗಳ ನಗದು ಹಾಗೂ 50 ಗ್ರಾಂ ಚಿನ್ನದ ಪದಕ |
| 2) | **ಎರಡನೇ ಅತ್ಯುತ್ತಮ ಚಿತ್ರ : 777 ಚಾರ್ಲಿ** | | |
| | ಎ) ನಿರ್ಮಾಪಕ | ಮೆ: ಪರಂವಃ ಸ್ಟುಡಿಯೋಸ್ ಪ್ರೈವೇಟ್ ಲಿಮಿಟೆಡ್ ಶ್ರೀ ರಕ್ಷಿತ್ ಶೆಟ್ಟಿ | ಎಪ್ಪತ್ತೈದು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಕಿರಣ್ ರಾಜ್. ಕೆ | ಎಪ್ಪತ್ತೈದು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 3) | **ಮೂರನೇ ಅತ್ಯುತ್ತಮ ಚಿತ್ರ : ಬಿಸಿಲು ಕುದುರೆ** | | |
| | ಎ) ನಿರ್ಮಾಪಕ | ಮೆ: ಮೆಟಾಫರ್ ಮೀಡಿಯಾ ಹೌಸ್ ಶ್ರೀ ಹೃದಯ ಶಿವ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಹೃದಯ ಶಿವ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 4) | **ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ : ಭಾರತದ ಪ್ರಜೆಗಳಾದ ನಾವು** | | |
| | ಎ) ನಿರ್ಮಾಪಕ | ಮೆ: ಜೈಭೀಮ್ ಪ್ರೊಡಕ್ಷನ್ಸ್ ಡಾ\| ಕೃಷ್ಣಮೂರ್ತಿ ಚಮರಂ | ಎಪ್ಪತ್ತೈದು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಡಾ\| ಕೃಷ್ಣಮೂರ್ತಿ ಚಮರಂ | ಎಪ್ಪತ್ತೈದು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 5) | **ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ : ಯುವರತ್ನ** | | |
| | ಎ) ನಿರ್ಮಾಪಕ (ಶ್ರೀ ನರಸಿಂಹರಾಜು ಪ್ರಶಸ್ತಿ) | ಮೆ: ಹೊಂಬಾಳೆ ಫಿಲ್ಮ್ಸ್ ಎಲ್ ಎಲ್ ಪಿ ಶ್ರೀ ವಿಜಯ್ ಕಿರಗಂದೂರ್ ಟಿ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಸಂತೋಷ್ ಆನಂದ್ ರಾಮ್ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |

4.....

Scanned with OKEN Scanner

| | | | |
|---|---|---|---|
| 6) | **ಅತ್ಯುತ್ತಮ ಮಕ್ಕಳ ಚಿತ್ರ : ಕೇಕ್** | | |
| | ಎ) ನಿರ್ಮಾಪಕ | ಮೆ: ಈಶ್ವರ್ ಕ್ರಿಯೇಷನ್ಸ್<br>ಶ್ರೀ ಪರೀಕ್ಷಿತ್ ಕೆ.ಐ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಕಿಶೋರ್ ಮೂಡಬಿದ್ರಿ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 7) | **ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ : ಬಡವ ರಾಸ್ಕಲ್** | | |
| | ಎ) ನಿರ್ಮಾಪಕ | ಮೆ: ಡಾಲಿ ಪಿಕ್ಚರ್ಸ್<br>ಶ್ರೀ ಧನಂಜಯ ಕೆ.ಎ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಶಂಕರ್ ಹೆಚ್ (ಶಂಕರ್ ಗುರು) | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 8) | **ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ : ನಾಡ ಪೆದ ಆಶಾ (ಕೊಡವ)** | | |
| | ಎ) ನಿರ್ಮಾಪಕ | ಮೆ: ವಿಕೆ3 ಪಿಚ್ಚರ್ಸ್<br>ಶ್ರೀ ಹರಿಣಿ ಜೆ ಸಿ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | ಬಿ) ನಿರ್ದೇಶಕ | ಶ್ರೀ ಪ್ರಕಾಶ್ ಕಾರ್ಯಪ್ಪ | ಐವತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 9) | **ಅತ್ಯುತ್ತಮ ನಟ**<br>(ಸುಬ್ಬಯ್ಯ ನಾಯ್ಡು ಪ್ರಶಸ್ತಿ) | ಶ್ರೀ ರಕ್ಷಿತ್ ಶೆಟ್ಟಿ<br>ಚಿತ್ರ : 777 ಚಾರ್ಲಿ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 10) | **ಅತ್ಯುತ್ತಮ ನಟಿ** | ಶ್ರೀಮತಿ ಅರ್ಚನಾ ಜೋಯಿಸ್<br>ಚಿತ್ರ : ಮ್ಯೂಟ್ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 11) | **ಅತ್ಯುತ್ತಮ ಪೋಷಕ ನಟ**<br>(ಕೆ.ಎಸ್. ಅಶ್ವಥ್ ಪ್ರಶಸ್ತಿ) | ಶ್ರೀ ಪ್ರಮೋದ್<br>ಚಿತ್ರ : ರತ್ನನ ಪ್ರಪಂಚ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 12) | **ಅತ್ಯುತ್ತಮ ಪೋಷಕ ನಟಿ** | ಶ್ರೀಮತಿ ಉಮಾಶ್ರೀ<br>ಚಿತ್ರ : ರತ್ನನ್ ಪ್ರಪಂಚ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 13) | **ಅತ್ಯುತ್ತಮ ಕತೆ** | ಶ್ರೀ ಮಂಜುನಾಥ್ ಮುನಿಯಪ್ಪ<br>ಚಿತ್ರ : 9 ಸುಳ್ಳು ಕಥೆಗಳು | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 14) | **ಅತ್ಯುತ್ತಮ ಚಿತ್ರಕತೆ** | ಶ್ರೀ ರಘು ಕೆ. ಎಂ<br>ಚಿತ್ರ : ದೊಡ್ಡಹಟ್ಟಿ ಬೋರೇಗೌಡ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 15) | **ಅತ್ಯುತ್ತಮ ಸಂಭಾಷಣೆ** | ಶ್ರೀ ಬರಗೂರು ರಾಮಚಂದ್ರಪ್ಪ<br>ಚಿತ್ರ : ತಾಯಿ ಕಸ್ತೂರ್ ಗಾಂಧಿ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 16) | **ಅತ್ಯುತ್ತಮ ಛಾಯಾಗ್ರಹಣ** | ಶ್ರೀ ಭುವನೇಶ್ ಪ್ರಭು<br>ಚಿತ್ರ : ಆಮ್ಚೆ ಸಂಸಾರ (ಕೊಂಕಣಿ) | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 17) | **ಅತ್ಯುತ್ತಮ ಸಂಗೀತ ನಿರ್ದೇಶನ** | ಶ್ರೀ ಇಮ್ತಿಯಾಜ್ ಸುಲ್ತಾನ್<br>ಚಿತ್ರ: ಬಿಸಿಲು ಕುದುರೆ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 18) | **ಅತ್ಯುತ್ತಮ ಸಂಕಲನ** | ಶ್ರೀ ಪ್ರತೀಕ್ ಶೆಟ್ಟಿ<br>ಚಿತ್ರ : 777 ಚಾರ್ಲಿ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 19) | **ಅತ್ಯುತ್ತಮ ಬಾಲ ನಟ** | ಮಾಸ್ಟರ್ ಅತೀಶ್ ಶೆಟ್ಟಿ<br>ಚಿತ್ರ : ಕೇಕ್ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |

5……

Scanned with OKEN Scanner

| | | | |
|---|---|---|---|
| 20) | **ಅತ್ಯುತ್ತಮ ಬಾಲ ನಟಿ** | ಬೇಬಿ ಭೈರವಿ<br>ಚಿತ್ರ : ಭೈರವಿ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 21) | **ಅತ್ಯುತ್ತಮ ಕಲಾ ನಿರ್ದೇಶನ** | ಶ್ರೀ ರವಿ ಸಂತೇಹಕ್ಲು<br>ಚಿತ್ರ : ಭಜರಂಗಿ - 2 | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 22) | **ಅತ್ಯುತ್ತಮ ಗೀತ ರಚನೆ** | ಶ್ರೀ ನಾಗಾರ್ಜುನ ಶರ್ಮಾ<br>ಚಿತ್ರ: 777 ಚಾರ್ಲಿ<br>ಹಾಡು: ಮಡಿಲಿನಲ್ಲಿ ಕಡಲಿನಷ್ಟು ಹನಿಗಳಿದ್ದರು.. | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 23) | **ಅತ್ಯುತ್ತಮ ಹಿನ್ನೆಲೆ ಗಾಯಕ** | ಶ್ರೀ ಅನೀಶ್ ಕೇಶವ ರಾವ್<br>ಚಿತ್ರ : ಶ್ರೀ ಜಗನ್ನಾಥ ದಾಸರು<br>ಹಾಡು: ರಾಮದೂತನ ಪಾದ... | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 24) | **ಅತ್ಯುತ್ತಮ ಹಿನ್ನೆಲೆ ಗಾಯಕಿ** | ಶ್ರೀಮತಿ ಸಹನಾ ಎಂ ಭಾರಧ್ವಾಜ್<br>ಚಿತ್ರ: ದಂಡಿ<br>ಹಾಡು: ಮುಗಿಲೇ ಮಾತಾಡು ಮನಸಾಗಿ.. | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| 25) | **ತೀರ್ಪುಗಾರರ ವಿಶೇಷ ಪ್ರಶಸ್ತಿ** | 1. ತೀರ್ಪುಗಾರರ ವಿಶೇಷ ಚಿತ್ರ : "ಭೈರವಿ"<br>ಮ: ಪ್ರಭಾಕರ್ ಮೂವೀಸ್<br>ನಿರ್ಮಾಪಕ: ಗಣೇಶನ್ ಕುಪ್ಪನ್<br>2. ವಸ್ತ್ರ ವಿನ್ಯಾಸ: ಯೋಗಿ ಜಿ ರಾಜು<br>ಚಿತ್ರ: ಭಜರಂಗಿ – 2<br>3. ಪ್ರಸಾದನ: ಶಿವಕುಮಾರ್<br>ಚಿತ್ರ: ತಾಯಿ ಕಸ್ತೂರ್ ಗಾಂಧಿ | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |
| | **(ಅ) ಅತ್ಯುತ್ತಮ ನಿರ್ಮಾಣ ನಿರ್ವಾಹಕ** | ಶ್ರೀ ಶಿವಕುಮಾರ್ ಎಸ್ ( ಶಿವಾರ್ಜುನ )<br>ಚಿತ್ರ: ಪೊಗರು | ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ |

M. Jacintha 29/9/2025
(ಎಂ.ಜೆಸಿಂತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ವಾರ್ತಾ ಶಾಖೆ) 29/09/25

Scanned with OKEN Scanner